

ಕಾಲವು ಕಳೆಯುತ್ತಾ ಕಳೆಯುತ್ತಾ ಮನುಷ್ಯನ ಅತಿಯಾದ ಆಗಮನದಿಂದ ನಮ್ಮ ಆತಂಕ ಹೆಚ್ಚುತ್ತಾ ಸಾಗುತ್ತಿತ್ತು. ಹೀಗಿರುವಾಗ ಆಷಾಢದ ಒಂದು ಮಳೆಯಲ್ಲಿ ಈಜಿ ಬಂದ ಒಂದು ಕಾಡು ಮಲ್ಲಿಗೆಯ ಬೀಜ ನನ್ನ ಬುಡದಲ್ಲಿ ಬಂದು ನೆಲೆ ನಿಂತಿತ್ತು. ಮುಂದೆ ನಿಧಾನವಾಗಿ ಅದು ನನ್ನ ದೇಹವನ್ನು ಬೆಸೆಯುತ್ತಾ ಸುಂದರವಾದ ಬಳ್ಳಿಯಿಂದ ತನ್ನ ಹೂವಿನ ಗಂಧವನ್ನು ಹೊರಹೊಮ್ಮಿಸುತ್ತಾ ಸುತ್ತಮುತ್ತಲ ಪ್ರದೇಶಕ್ಕೆ ನವ ಚೈತನ್ಯವನ್ನು ಒದಗಿಸಿತ್ತು. ನಾನು ಮತ್ತು ಅವಳು (ಬಳ್ಳಿ) ದಿನವಿಡೀ ಮಾತುಕತೆ ನಡೆಸುತ್ತಾ ಚೇಷ್ಟೆ, ತಮಾಷೆಗಳಲ್ಲಿ ಕಾಲ ಕಳೆದುಬಿಡುತ್ತಿದ್ದೆವು. ಅವಳು ಬಂದ ನಂತರವೇ ನನ್ನ ಗುಣಕ್ಕೆ ಹೃದಯ ವೈಶಾಲ್ಯದ ಸ್ಪರ್ಶ ದಕ್ಕಿದ್ದು. ಮುಂದೆ ನನಗೆ ಅವಳೊಂದಿಗೆ ಲಗ್ನವಾಗಿದ್ದು, ಚಳಿಗಾಲದ ಒಂದು ಸಂಜೆ ಮಾನವನ ಶಿಕಾರಿಯಿಂದ ತಪ್ಪಿಸಿಕೊಳ್ಳಲು ನನ್ನತ್ತ ನುಗ್ಗಿದ ಕಾಡೆಮ್ಮೆಯ ಪಾದದ ಅಡಿಯಲ್ಲಿ ಸಿಕ್ಕ ನನ್ನವಳ ಬುಡ ಹಠಾತ್ತನೆ ಮಣ್ಣನ್ನು ಸೀಳಿಕೊಂಡು ಮಾರುದ್ದದಲ್ಲಿ ಬಿದ್ದಿತ್ತು. ಹೀಗೆ ನಮ್ಮವರು ಅಂದುಕೊಡಿದ್ದವರಿಂದಲೇ ನನ್ನವಳ ಅಂತ್ಯವಾಗಿತ್ತು. ಆದರೆ ಮುಂದೆ ಇದನ್ನು ಕೊಲೆ ಅಲ್ಲ ಅಪಘಾತ ಎಂದು ಎಲ್ಲರು ಒಮ್ಮತದ ನಿರ್ಧಾರ ಕೈಗೊಂಡಿದ್ದರು. ನಾನು ಮಾತ್ರ ವಿರಹ ವೇದನೆಯಲ್ಲಿ ಮೂಕನಾಗಿದ್ದೆ. ಇದಾದ ನಂತರ ನನ್ನ ದೇಹಕ್ಕೆ ಅನೇಕ ರೀತಿಯ ಬಳ್ಳಿಗಳು ಹಬ್ಬಿದ್ದವು, ಆದರೆ ಅವ್ಯಾವುವೂ ನನ್ನವಳ ನೆನಪು ಅಳಿಸುವ ಶಕ್ತಿಯನ್ನು ಹೊಂದಿರಲಿಲ್ಲ.

ಒಮ್ಮೆ ನಾವುಗಳು ಜೋರು ಹಾಸ್ಯದಲ್ಲಿ ತೊಡಗಿದ್ದೆವು. ಮತ್ತೀ ಮರದ ಎಲೆಯಲ್ಲಿನ ಗಂಪಿನ ಅಂಶವನ್ನು ಆಡಿಕೊಂಡು ಅದಕ್ಕೆ ರೇಗಿಸುತ್ತಿದ್ದೆವು. ಆಗ ಆದ ಢುಂ... ಎಂಬ ಸದ್ದು ನಮ್ಮ ಎದೆಯನ್ನು ನಡುಗಿಸಿಬಿಟ್ಟಿತ್ತು. ಎರಡು ದಿನವಾದ ಮೇಲೆ ಯಾರೋ ಕಾಡುಹಂದಿಯನ್ನು ಶಿಕಾರಿ ಮಾಡಿದರೆಂಬುದು ತಿಳಿಯಿತು. ಅನಂತರದ ನಮ್ಮ ಸಂಭಾಷಣೆಗಳೆಲ್ಲವೂ ಈ ಶಿಕಾರಿ ಮತ್ತು ಅದರ ಪರಿಣಾಮಗಳ ಮೇಲೆಯೇ ನಡೆದಿರುತ್ತಿದ್ದವು.

ನಾನೀಗ ಮುಂಚಿನಂತೆ ಪೀಕಲಾಗಿರಲಿಲ್ಲ. ವಿಶಾಲವಾದ ಹೆರೆಗಳನ್ನು ಹರಡಿ ಎತ್ತರಕ್ಕೆ, ದಪ್ಪಗೆ ಬೆಳೆಯುತ್ತಾ ಹೆಣಕೆಯ ತುಂಬಾ ಹಣ್ಣು ಬಿಡತೊಡಗಿದ್ದೆ. ಅಜ್ಜ ಇತ್ತೀಚೆಗೆ ಫಸಲು ಕೊಡುವುದನ್ನು ನಿಲ್ಲಿಸಿದ್ದರಿಂದಲೋ ಅಥವಾ ನನ್ನ ಹಣ್ಣುಗಳು ತುಂಬಾ ರುಚಿ ಇದ್ದವೋ ತಿಳಿಯದು, ಕೆಲವು ದಿನಗಳಲ್ಲಿಯೇ ನನ್ನದು ನೂರಾರು ಪ್ರಾಣಿ ಪಕ್ಷಿಗಳ ಆಶ್ರಯತಾಣವಾಗಿ ಮಾರ್ಪಟ್ಟಿತ್ತು. ಪೊಟರು ಬಿದ್ದ ನನ್ನ ಒಂದು ಭಾಗ ಇಣಚಿಗೆ ಸೂರಾದರೆ, ಕೆಂದಳಿಲು ತನ್ನ ಸೃಜನಾತ್ಮಕತೆಯಿದ ನನ್ನ ಎರಡು ಕೊಂಬೆಯ ಮಧ್ಯೆ ಚಪ್ಪರದ ರೀತಿಯ ಪುಟ್ಟ ಮನೆಯನ್ನು ನಿರ್ಮಿಸಿ ಬದುಕುತ್ತಿತ್ತು. ಹಾರುಬೆಕ್ಕಿನ ಮನೆ ನನ್ನ ಇನ್ನೊಂದು ದಿಕ್ಕಿನಲ್ಲಿ ಪ್ರತಿಷ್ಠಾಪಿಸಲ್ಪಟ್ಟಿತ್ತು. ಉಳಿದಂತೆ ಕಾಡುಗಿಳಿ, ಶ್ಯಾಮನಹಕ್ಕಿ, ಮಂಗಟ್ಟೆ, ಗೋಪೀಹಕ್ಕಿ, ಭಾರದ್ವಾಜ, ಜೇನು ಗಿಡುಗ ಮುಂತಾದ ಮಲೆನಾಡಿನ ಸುಂದರ ಪಕ್ಷಿಗಳು ನನ್ನ ಆಶ್ರಯವನ್ನೇ ಪಡೆದಿದ್ದವು. ಇದನ್ನು ನಾನು 'ನನ್ನ ಬದುಕಿನ ಸುವರ್ಣಕಾಲ' ಎಂದೇ ಬಣ್ಣಿಸುತ್ತೇನೆ.

ನಾನು ಮತ್ತು ನನ್ನ ಗುಂಪು ವರ್ಷದ ಮೊದಲ ಮಳೆಯನ್ನು ಆನಂದದಿಂದ ಆಹ್ವಾನಿಸಿದ್ದೆವು ಮತ್ತು ಅದನ್ನು ಆಸ್ವಾದಿಸುತ್ತಿದ್ದೆವು. ಆದರೆ ಈ ಬಾರಿಯ ಮಳೆ ತನ್ನ ಪ್ರಚಂಡ ಶಕ್ತಿ ತೋರಿ ಧೋ ಎಂದು ಸುರಿದ ಹೊಡೆತಕ್ಕೆ ನನ್ನ ಪ್ರೀತಿಯ ಜಂಬೂಕ ಅಜ್ಜ ನೆಲಕ್ಕುರುಳಿದ್ದ. ಅವನ ಜೊತೆ ಅವನನ್ನೇ ಅವಲಂಬಿಸಿದ್ದ ಬಳ್ಳಿಗಳು, ಪಾಚಿ, ಅಣಬೆ, ಹಕ್ಕಿ ಗೂಡುಗಳೆಲ್ಲಾ ನಿರ್ನಾಮವಾಗಿದ್ದವು. ನಮ್ಮಗಳ ಆಕ್ರಂದನ ಮುಗಿಲುಮುಟ್ಟಿತ್ತು. ನಮ್ಮ ಗುಂಪಿನ ನಾಯಕನಾದ ಅಜ್ಜ ಹೋದಾಗಿನಿಂದ ನಮ್ಮನ್ನು ಮೌನ ಆಳಲು ಶುರುಮಾಡಿತ್ತು. ಅಂತಹ ಸಂದರ್ಭದಲ್ಲಿ ಮದ್ದಾಲ ಹೊಸ ನಾಯಕನಾಗಿ ಆಯ್ಕೆಗೊಂಡಿದ್ದ. ಅತೀ ಎತ್ತರವಾಗಿ ಬೆಳೆದಿದ್ದ ಅವನು ದೂರದ ಆಗುಹೋಗುಗಳನ್ನೆಲ್ಲಾ ವರದಿ ಮಾಡುತ್ತಿದ್ದ. ಹೇಗೋ ಅಜ್ಜನ ನೆನಪು ನಿಧಾನವಾಗಿ ಮಾಯವಾಗಿತ್ತು.

ನಮ್ಮ ಬೆನ್ನಿಗೆ ಹರಿಯುತ್ತಿದ್ದ ಹಳ್ಳಕ್ಕೆ ಅದೇನೋ ಕಾಲ್ದೀತುವೆ ಕಟ್ಟಿದ್ದರಂತೆ, ಅಲ್ಲಿಂದ ನಮ್ಮ ಆತಂಕ ಮುಗಿಲು ಮುಟ್ಟಲಾರಂಭಿಸಿತ್ತು. ಹಿಂದೆ ತಿಂಗಳಿಗೋ ವರ್ಷಕ್ಕೋ ಒಮ್ಮೆ ಬರುತ್ತಿದ್ದ ಮಾನವರು ಈಗ ದಿನನಿತ್ಯವೂ ಗುಂಪು ಗುಂಪುಗಳಾಗಿ ಓಡಾಡಲಾರಂಭಿಸಿದ್ದರು. ಅವರು ನಮ್ಮ ಕಾಡನ್ನು ದಾಟಿ ಇನ್ನೊಂದು ಊರಿಗೆ ಹೋಗಲು ಶುರು ಮಾಡುತ್ತಿದ್ದಂತೆ ಅಲ್ಲಿ ಒಂದು ಕಾಲುದಾರಿಯೇ ನಿರ್ಮಾಣವಾಗಿತ್ತು. ಕೆಲದಿನಗಳಲ್ಲಿ ನನ್ನ ಫಲಭರಿತ ಹೆಣಕೆಗಳಿಗೆ ಶಾಲೆಗೆ ಹೋಗುವ ಮಕ್ಕಳು ಕಲ್ಲಿನಿಂದ, ಕೋಲಿನಿಂದ ಹೊಡೆಯುವುದೂ, ನಾನು ಆ ಕೋಲುಗಳನ್ನು ಕೆಲ ಸಮಯದವರೆಗೆ ನನ್ನ ಹೆಣಕೆಗಳಲ್ಲಿಯೇ ಬಂಧಿಸಿಟ್ಟುಕೊಂಡು ಆ ಮಕ್ಕಳಿಗೆ ಸತಾಯಿಸುವುದು ಒಂದು ಆಟವೇ ಆಗಿಹೋಗಿತ್ತು. ಮಕ್ಕಳ ಆಟ ಮುಗಿಯುತ್ತಿದ್ದಂತೆ ಮಂಗಗಳ ಆಟ ಶುರುವಾಗುತ್ತಿತ್ತು. ಈ ನಡುವೆ ನಮ್ಮ ಮಾರ್ಗದಲ್ಲಿ ಓಡಾಡುತ್ತಿದ್ದ ಜುಟ್ಟು ಬಿಟ್ಟ ವ್ಯಕ್ತಿಯೊಬ್ಬ ತನ್ನ ಹರಿತವಾದ ಕತ್ತಿಯಿಂದ ನನ್ನ ಕಾಂಡದ ಚೆಕ್ಕೆ ಎತ್ತಲು ಶುರು ಮಾಡಿದ್ದ. ಇದು ನನ್ನೊಳಗಿನ ಕೋಪವನ್ನು ಹಾಗೂ ನೋವನ್ನು ವ್ಯಕ್ತಪಡಿಸಲಾಗದೇ ನರಳಿದ್ದೆ. ಆದರೆ ಆ ವ್ಯಕ್ತಿ ಚಕ್ಕೆಗಳನ್ನು ಸ್ವಾರ್ಥಕ್ಕಾಗಿ ಬಳಸದೇ ಅದನ್ನು ಉಬ್ಬಸ, ಅಸ್ತಮಾ ಮುಂತಾದ ಮಾನವರಿಗಡರುವ ಕಾಯಿಲೆಗೆ ಉಚಿತವಾಗಿ ಔಷಧ ನೀಡಲು ಬಳಸುತ್ತಿದ್ದ ಎಂದು ತಿಳಿದ ನಂತರ ನನ್ನ ಕೋಪವನ್ನು ಅದುಮಿ ಇನ್ನೊಂದು ಜೀವವನ್ನು ಉಳಿಸುವ ಕಾರ್ಯಕ್ಕೆ ಅನುವು ಮಾಡಿಕೊಟ್ಟಿದ್ದೆ.

ಅದು ಪುನರ್ವಸುವಿನ ಅಂತ್ಯದ ದಿನಗಳು, ಆದರೂ ಒಂದು ಹನಿ ನೀರೂ ನಮ್ಮನ್ನು ತಾಕಿರಲಿಲ್ಲ. ನನ್ನ ಹೆಣಕೆಯಲ್ಲಿ ಜೋತಿದ್ದ ಹಣ್ಣುಗಳು ಜೀವಜಲವಿಲ್ಲದೇ ಅಲ್ಲೇ ಒಣಗಿ ಹಣ್ಣು ಮುದುಕರಂತಾಗಿದ್ದವು. ಇವೆಲ್ಲವಕ್ಕೂ ಮನುಷ್ಯನ ನಗರೀಕರಣವೆ ಕಾರಣವೆಂದು ಬುದ್ಧಿವಂತ ನರಿ ಇಲ್ಲಿಗೆ ಬಂದಾಗಲೆಲ್ಲಾ ಭಾಷಣ ಬಿಗಿದು ಮನುಷ್ಯರ ವಿರುದ್ಧ ಬಂಡಾಯ ಏಳಲು ನಮ್ಮನ್ನು ಸಜ್ಜುಗೊಳಿಸುತ್ತಿದ್ದ. ಈಗ ನಮ್ಮ ಗುಂಪಿಗೆ ಹಣ್ಣು ಸಂಪಿಗೆ, ಕಾಡುನೆಲ್ಲಿ, ಅಳಲೆ, ಕೊಡಸ ಮುಂತಾದ ಮರಗಳ ಸೇರ್ಪಡೆಯಾಗಿತ್ತು. ತುಂಬಾ ಹಾಸ್ಯಪ್ರಜ್ಞೆಯವನಾಗಿದ್ದ ಸಂಪಿಗೆಮರ ಸದಾ ನಮ್ಮ ದುಗುಡವನ್ನು ಮರೆಸುವ ಕಾರ್ಯ ಮಾಡುತ್ತಿದ್ದ. ಹೀಗಿರುವಾಗ ಒಂದು ದಿನ ಒಬ್ಬ ಮಾನವ ನಮ್ಮ ಗುಂಪಿನತ್ತ ಬಂದು ನನ್ನನ್ನೂ ಸೇರಿದಂತೆ ಇನ್ನೂ ಕೆಲ ಮರಗಳನ್ನು ತಬ್ಬಿಕೊಂಡ, ಬಾಯಲ್ಲಿ ಏನನ್ನೋ ಬಡಬಡಿಸುತ್ತಿದ್ದ. ನನ್ನ ಬುಡದಲ್ಲಿ ಕುಳಿತು ಅದೇನನ್ನೋ ಬರೆಯುತ್ತಿದ್ದ. ನಂತರ ಸ್ವಲ್ಪಹೊತ್ತು ವಿಶ್ರಮಿಸಿ ತೆರಳಿದ. ಇದಾದ ನಂತರ ನಮ್ಮ ನಾಯಕನಾದ ಮದ್ದಾಲೆಯು ಒಂದು ಸಭೆಯನ್ನು ಕರೆದು ಈ ಆಗಂತುಕ ಮಾನವನ ವಿರುದ್ಧ ಹೋರಾಡಲು ಸಜ್ಜಾಗಿರಿ ಎಂದಿದ್ದ ಆದರೆ ಆಗ ನಾನು ಅದಕ್ಕೆ ವಿರೋಧ ವ್ಯಕ್ತಪಡಿಸುತ್ತಾ ಇವನನ್ನು ನೋಡಿದರೆ ಅಪಾಯಕಾರಿಯಂತೆ ಕಾಣುವುದಿಲ್ಲ, ಇವನು ಒಳ್ಳೆಯ ಮಾನವನೆಂದು ವಾದಿಸಿದ್ದೆ.

ನಂತರದ ದಿನಗಳಲ್ಲಿ ಪದೇ ಪದೇ ಈ ಜಾಗಗಳಲ್ಲಿ ಓಡಾಡುತ್ತಿದ್ದ. ವಿವಿಧ ಜಾತಿಯ ಸಸಿಗಳನ್ನು ನೆಡುತ್ತಿದ್ದ. ಅಲ್ಲಲ್ಲಿ ಇಂಗು ಗುಂಡಿಗಳನ್ನು ತೋಡುತ್ತಿದ್ದ. ಪೊಟ್ಟಣದಲ್ಲಿರುತ್ತಿದ್ದ ವಿವಿಧ ಜಾತಿಯ ಕಾಳುಗಳನ್ನು ಅಲ್ಲಲ್ಲಿ ಎಸೆಯುತ್ತಿದ್ದ. ಇದು ಪಕ್ಷಿಗಳಿಗೆ ಕೀಟಗಳಿಗೆ ಅದೇ ದಿನದ